ಸೂಕ್ಷ್ಮವಾಗಿ ಗಮನಿಸುತ್ತಿದ್ದುದೇ ಸಾಹೇಬರ ಸ್ಪೆಷಾಲಿಟಿಯಲ್ಲವೆ?...

ಒಮ್ಮೆ ಹೀಗೇ ಕ್ಯಾಷುವಲ್ಲಾಗಿ ಹ್ಯಾಟ್‌ಲೆಸ್ ಸೆಲ್ಯೂಟು ಕೊಟ್ಟ ಹೊಸ ಸಿಬ್ಬಂದಿಯೊಬ್ಬನನ್ನು ಸಾಹೇಬರು ತಡವಿಕೊಂಡರು. "ಯಾರಪ್ಪಾ ನಿಂಗೆ ಸಲ್ಯೂಟು ಹೊಡೆಯಕ್ಕೆ ಕಲಿಸಿದ್ದು. ಮೊದಲು ಅವನಿಗೆ ತರಬೇತಿ ಕೊಡಬೇಕು ನೋಡು. ಅಲ್ರಯ್ಯಾ? ಯಾವ ಸೀಮೆ ಟ್ರೇನಿಂಗು ಮಾಡಿದ್ದೀರಿ ನೀವೆಲ್ಲಾ? ಮೊದ್ಲು ಜೀವನದಾಗೆ ಶಿಸ್ತು ಕಲೀರಯ್ಯಾ, ನಿಮ್ಮ ಸಲ್ಯೂಟು ಬೇಕು ಅಂತ ಕೇಳಿದೋನು ಯಾರು?... ಗೌರವ ಕೊಡಬೇಕು ಅನ್ನಿಸಿದ್ರೆ ಶಿಸ್ತುಬದ್ಧವಾಗಿ ಹೊಡೀರಿ, ಬೇಡಾ ಅಂದರೆ ಅಂಡು ತಿರುಗಿಸ್ಕಂಡು ಆ ಕಡೆ ತಿರಗಿ ನಿಂತ್ಕಂಬುಡಿ. ಸುಮ್ನೆ ಹೊರಟೋಗ್ತೀನಿ, ಅದು ಬಿಟ್ಟು... ಈ ಅರ್ಧಂಬರ್ಧ ಸಲ್ಯೂಟು ಹೊಡೆದು ಯಾಕೆ ಇಲಾಖೆಗೆ ಅವಮಾನ ಮಾಡ್ತೀರಿ?" ಅನ್ನುತ್ತಿದ್ದರು.

ಗೆಳೆಯ ಮನೋಜನೇ ಒಮ್ಮೆ ಯಾಮಾರಿಬಿಟ್ಟಿದ್ದ. ಯಾವುದೋ ಧ್ಯಾನದಲ್ಲಿ ಕ್ಯಾಪು ಟೀಪಾಯಿ ಮೇಲಿಟ್ಟಿದ್ದವನು ಸಾಹೇಬ್ರು ತಕ್ಕಣಕ್ಕೆ ಬಂದ್ರೂಂತ ಎದ್ದು ಥಟಾರನೆ ಬರಿಗೈಯಲ್ಲೇ ಸಲ್ಯೂಟು ಬಾರಿಸಿದ್ದಾನೆ. ಸಾಹೇಬರು ನಿಂತಲ್ಲಿ ಏನು ರಿಯಾಕ್ಷನ್ನು ಕೊಡದಿದ್ದರೂ ಒಮ್ಮೆ ವಿಚಿತ್ರವಾಗಿ ನೋಡಿ ಸುಮ್ಮನೆ ಒಳಹೋಗಿದ್ದಾರೆ. ಯಾಕೆ ಅವರು ತನ್ನ ಸಲ್ಯೂಟು ಸ್ವೀಕರಿಸಲಿಲ್ಲ ಎಂದು ತಲೇಲಿ ಹುಳು ಬಿಟ್ಟುಕೊಂಡವನಿಗೆ ತಪ್ಪಿನ ಅರಿವಾಗಿದೆ. ಕೆದಕಿದರೆ ತನಗೇ ತಲೆಬೇನೆ ಅಂದುಕೊಂಡು ಸುಮ್ಮನಾಗಿಯೂ ಬಿಟ್ಟಿದ್ದಾನೆ. ಆತ ಬಿಟ್ಟರೂ ಸಾಹೇಬರು ಬಿಡಬೇಕಲ್ಲ? ಮಟಮಟ ಮಧ್ಯಾಹ್ನದ ಲಂಚ್ ಅವರಿನಲ್ಲಿ ಅವನನ್ನು ಚೇಂಬರಿಗೆ ಕರೆದು ಕೂರಿಸಿಕೊಂಡು ತಾವೂ ಊಟ ಮಾಡದೆ ಅವನಿಗೂ ಊಟ ಮಾಡಲು ಬಿಡದೆ ನೀಡಿದ ಆ 'ಲಾಸ್ಟ್ ಲೆಕ್ಚರ್'ನ ಸಮಾನವಾದ ಬೋಧನೆ ಅವನನ್ನು ಸಂಪೂರ್ಣವಾಗಿ ಶಿಸ್ತಿನ ಸಿಪಾಯಿ

